**OS 84/2013**
**PW-1**

**<u>ದಿನಾಂಕಃ 29.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎ ಎಲ್ ಎಸ್ ವಕೀಲರಿಂದಃ</u>**

ದಿನಾಂಕ 23.07.1956 ರ ಬಾಡಿಗೆ ಕರಾರು ಪತ್ರವನ್ನು ಹಾಜರು ಪಡಿಸುತ್ತಿದ್ದು (ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ಬಾಡಿಗೆ ಕರಾರು ಪತ್ರವನ್ನು ನಿಶಾನೆಗೆ ಒಳಪಡಿಸಲು ತಕರಾರು ಮಾಡಿದ್ದರಿಂದ ಸದರಿ ಬಾಡಿಗೆ ಕರಾರು ಪತ್ರವನ್ನು ತಕರಾರಿಗೆ ಒಳಪಟ್ಟು ನಿಶಾನೆಗೆ ಒಳಪಡಿಸಲು ತೀರ್ಮಾನಿಸಲಾಯಿತು) ಅದನ್ನು ನಿಪಿ-9 ಎಂದು, ತೆರಿಗೆ ಸ್ವೀಕೃತಿ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ ಎಮ್ ಎನ್ ವಕೀಲರಿಂದಃ</u>**

ಈ ದಾವೆಯನ್ನು ಸಲ್ಲಿಸುವಾಗ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಿಪಿ-9 ರ ದಾಖಲಾತಿಯ ಬಗ್ಗೆ ನಾನು ನನ್ನ ದಾವೆಯಲ್ಲಿ ನಮೂದು ಮಾಡಿರುತ್ತೇನೆ. ನಿಪಿ-9 ರ ದಾಖಲಾತಿಯು ಯಾವ ವರ್ಷ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ನಿಪಿ-9 ರ ದಾಖಲಾತಿಯು ಸಿದ್ದೇಗೌಡ ಬಿನ್ ಪುಟ್ಟೇಗೌಡ ಮತ್ತು ಎಮ್ಮೆಗೌಡರ ದಾಸೇಗೌಡರ ಮಗ ಸಿದ್ದೇಗೌಡರ ನಡುವೆ ಆಗಿರುತ್ತದೆ. ನನ್ನ ವಾದ ಪತ್ರದ ಎರಡನೇ ಪ್ಯಾರದಲ್ಲಿ ಬರೆದಿರುವ ವಿಚಾರಗಳು ಸರಿಯಾಗಿರುತ್ತವೆ. ನಿಪಿ-9 ರ ದಾಖಲಾತಿಯು ನಮ್ಮ ಮನೆಯಲ್ಲಿಯೇ ದೊರೆತಿರುತ್ತದೆ. ಸದರಿ ನಿಪಿ-9 ರಲ್ಲಿ ನಮೂದಿಸಿರುವ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿ ನಮೂದಿಸಿರುವ ಅಳತೆಯ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿ ನಮೂದಿಸಿರುವ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಜೋಗಿ ರಾಮೇಗೌಡರ ಸಿದ್ದೇಗೌಡರವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಕೃಷ್ಣೇಗೌಡ ಬಿನ್ ಲಿಂಗೇಗೌಡರ ಮನೆ ಬರುತ್ತದೆ. ನಿಪಿ-9 ರಲ್ಲಿ ಅಳತೆ ಮತ್ತು ಆಸ್ತಿ ಸಂಖ್ಯೆ ಇರುವುದಿಲ್ಲ. ನಿಪಿ-9 ಮತ್ತು 10 ದಾಖಲಾತಿಗೂ ಈ ದಾವೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

**OS 84/2013**
**PW-1**

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ